**ಸಾಕ್ಷಿಗೆ ದಿನಾಂಕ 12.01.2024 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. ವಿಜಯ್ ಗೋವಿಂದರಾಜ್ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ ವೈದ್ಯ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ಗಾಯಾಳುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿದಾರರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 11. | ಕ್ಲಿನಿಕಲ್ ನೋಟ್ |
| ನಿ.ಪಿ 12. | ಎಕ್ಸ್-ರೇ |

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ರವಿ ಎಸ್ ಸಂಪ್ರತಿ ವಕೀಲರಿಂದಃ**

1. ನಾನು ಅರ್ಜಿದಾರರಿಗೆ ಮೂಲತಃ ಚಿಕಿತ್ಸೆಯನ್ನು ನೀಡಿದ ವೈದ್ಯನಾಗಿರುತ್ತೇನೆ ನಾನು ಮೊದಲ ಬಾರಿ ಅರ್ಜಿದಾರರನ್ನು ದಿ.30.01.2022 ರಂದು ನೋಡಿರುತ್ತೇನೆ. ಅವರಿಗೆ ಆದಂತ ಗಾಯಗಳು ತಾಜಾ ಗಾಯಗಳಾಗಿದ್ದವು. ಅವರಿಗೆ ಲೆಫ್ಟ್ ಕ್ಲಾವಿಕಲ್ ಮೂಳೆ ಮುರಿತ ಆಗಿತ್ತು. ಸದರಿ ಮೂಳೆ ಮುರಿತ ಈ ಕೂಡಿಕೊಂಡಿರುತ್ತೇನೆ. ಕ್ಲಾವಿಕಲ್ ಮೂಳೆಯನ್ನು ಅಲಂಕಾರಿಕ ಮೂಳೆ ಎಂದು ಮಾತ್ರ ಪರಿಗಣಿಸಲಾಗುತ್ತದೆ ಎಂದರೆ

ಸರಿಯಲ್ಲ. ಸದರಿ ಮೂಳೆ ಮುರಿತದಿಂದ ಯಾವುದೇ ದೈಹಿಕ ತೊಂದರೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪ್ಪರ್ ಲಿಂಬಿನ ಚಲನವಲನ ಆ ಮೂಳೆಗೆ ಅವಲಂಬಿತವಾಗಿದೆ ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಮಿಡ್ ಕ್ಲಾವಿಕಲ್ ಮೂಳೆ ಮುರಿತ ಆಗಿರುತ್ತದೆ. ಅರ್ಜಿದಾರರಿಗೆ ಮಿಡ್ ಕ್ಲಾವಿಕಲ್ ಮೂಳೆ ಮುರಿತ ಆಗಿರುವುದರಿಂದ ಅಂಗನ್ಯೂನ್ಯತೆಯ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ.

**2.** ಒಳಜೋಡಣೆಯನ್ನು ಹೊರತೆಗೆಯದ ಕಾರಣ, ಚಲನವಲನದಲ್ಲಿ ಕುಂಟಿತ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಒಳಜೋಡಣೆಯನ್ನು ಹೊರತೆಗೆದ ನಂತರ ಶಾಶ್ವತ ಅಂಗನ್ಯೂನ್ಯತೆಯ ಬಗ್ಗೆ ಲೆಕ್ಕಚಾರ ಹಾಕಬೇಕು ಮತ್ತು ಅಭಿಪ್ರಾಯ ವ್ಯಕ್ತ ಪಡಿಸಬೇಕು ಎಂದರೆ ಸರಿಯಲ್ಲ. ಅರ್ಜಿದಾರರ ಮುಂದುವರೆದ ಚಿಕಿತ್ಸೆಗೆ **40** ಸಾವಿರ ಖರ್ಚಾಗುತ್ತದೆ ಎಂದು ತೋರಿಸಲು ಎಸ್ಟಿಮೇಶನ್ ಅನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಮುಂದುವರೆದ ಚಿಕಿತ್ಸಾ ವೆಚ್ಚವನ್ನು ಹೆಚ್ಚುವರಿಯಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಂಪೂರ್ಣ ದೇಹದ ಅಂಗನ್ಯೂನ್ಯತೆ **10** ಶೇಕಡ ಎಂದು ಹೆಚ್ಚುವರಿಯಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**3.** ಕ್ಲಾವಿಕಲ್ ಮೂಳೆ ಮುರಿತ ವಕ್ರವಾಗಿ ಕೂಡಿಕೊಂಡಿದ್ದರೂ ಸಹಾ ಅಂಗನ್ಯೂನ್ಯತೆಯ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಏನು ಉದ್ಯೋಗ ಮಾಡುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಅರ್ಜಿದಾರರ ದೈಹಿತ ನ್ಯೂನ್ಯತೆಗೆ ಸಂಬಂಧಿಸಿದಂತೆ ಮಾತ್ರ ನಾನು ಅಭಿಪ್ರಾಯ ವ್ಯಕ್ತ ಪಡಿಸಿರುತ್ತೇನೆ.

ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರಿಗೆ ಅಂಗನ್ಯೂನ್ಯತೆ ಇಲ್ಲದಿದ್ದರೂ ಸಹಾ 10 ಶೇಕಡ ಅಂಗನ್ಯೂನ್ಯತಾ ಶೇಕಡವನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.**